ಸದನದಲ್ಲಿ ಉತ್ತರಿಸುವ ಪ್ರಶ್ನೆಗಳು

ಕರ್ನಾಟಕ ವಿಧಾನ ಪರಿಷತ್ತು
ನೂರ ನಲವತ್ತನೆಯ ಅಧಿವೇಶನ
ಗುರುವಾರ, ದಿನಾಂಕ : 19 ನೇ ಮಾರ್ಚ್, 2020

ಬಿಡಿಎ ನಿವೃತ್ತ ಅಧಿಕಾರಿ/ನೌಕರರನ್ನು ಸೇವೆಯಲ್ಲಿ ಮುಂದುವರೆಸಿರುವ ಬಗ್ಗೆ

ಶ್ರೀ ಶರಣಪ್ಪ ಮಟ್ಟೂರ (ಶಿಕ್ಷಕರ ಕ್ಷೇತ್ರ) -

192 (1470) ಮಾನ್ಯ ಮುಖ್ಯಮಂತ್ರಿಗಳು ವಿಷಯಗಳನ್ನು ದಯವಿಟ್ಟು ತಿಳಿಸುವರೆ-

(ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಒಟ್ಟು ಅಧಿಕಾರಿ/ನೌಕರರು ಎಷ್ಟು ;

(ಆ) ಇವರುಗಳಲ್ಲಿ ಪ್ರಾಧಿಕಾರದ ಅಧಿಕಾರಿ/ನೌಕರರೆಷ್ಟು ಮತ್ತು ಎರವಲು ಸೇವೆ/ಓಓಡಿ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ ನೌಕರರೆಷ್ಟು ; ಹೆಸರು, ಇಲಾಖೆವಾರು ಮಾಹಿತಿ ನೀಡುವುದು ; ಇವರಲ್ಲಿ ಒಂದಕ್ಕಿಂತ ಹೆಚ್ಚು ಬಾರಿ ಪ್ರಾಧಿಕಾರಕ್ಕೆ ಬಂದವರ ಮಾಹಿತಿ ನೀಡುವುದು ;

(ಇ) ಪ್ರಾಧಿಕಾರದಲ್ಲಿ ಗುತ್ತಿಗೆ/ಹೊರಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ/ನೌಕರರೆಷ್ಟು ;

(ಈ) ಪ್ರಾಧಿಕಾರದಿಂದ ನಿವೃತ್ತಿ ಹೊಂದಿದ ಅಧಿಕಾರಿ/ನೌಕರರನ್ನು ಮುಂದುವರೆಸಿರುವುದು ನಿಜವೇ ; ಇದ್ದಲ್ಲಿ, ಯಾವ್ಯಾವ ದಿನಾಂಕದಂದು ನಿವೃತ್ತಿ ಹೊಂದಿದವರನ್ನು ಯಾವ ದಿನಾಂಕದಿಂದ ಮುಂದುವರೆಸಲಾಗಿದೆ ; ಮಾಹಿತಿ ನೀಡುವುದು ;

(ಉ) ನಿವೃತ್ತರನ್ನು ಮುಂದುವರೆಸಿರುವುದು ಸರ್ಕಾರದ ಆದೇಶದ ವಿರುದ್ಧವಾಗಿಲ್ಲವೇ; ನಿವೃತ್ತರಿಂದಾಗುವ ಅಚಾತುರ್ಯ ಅಥವಾ ಬೇಜವಾಬ್ದಾರಿತನಗಳಿಗೆ ಹೇಗೆ ಜವಾಬ್ದಾರಿ ನಿಗಧಿಗೊಳಿಸಲು ಸಾಧ್ಯ ; (ಮಾಹಿತಿ ನೀಡುವುದು)

(ಊ) ಇಂತಹವುಗಳನ್ನು ತಪ್ಪಿಸಿ ಅನೇಕ ವರ್ಷಗಳಿಂದ ಅನುಕಂಪದ ಆಧಾರದ ಮೇಲೆ ಉದ್ಯೋಗ ಬಯಸಿ ಅರ್ಜಿ ಸಲ್ಲಿಸಿದವರನ್ನು ಪರಿಗಣಿಸಲು ಸರ್ಕಾರಕ್ಕೆ ಇರುವ ತೊಂದರೆಗಳೇನು ; ಈ ಬಗ್ಗೆ ಕೈಗೊಳ್ಳುವ ಕ್ರಮಗಳೇನು ?